ಓ.ಎಸ್. ಸಂ.: 35/2014 ಪಿ.ಡಬ್ಲ್ಯೂ.1

ದಿ: 08.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು: 1 ರಿಂದ 4ನೇ ಪ್ರತಿವಾದಿಯರ ಪರ ಶ್ರೀ ಎಚ್. ಎ. ಸಿ. ವಕೀಲರಿಂದ:-**

5. ನಾವು ಮೂಲತಃ ಎನ್ನಾಗರ ಗ್ರಾಮದವರು. ಹಾಲಿ ನಾನು ಮಾಸ್ತೇನಹಳ್ಳಿಯಲ್ಲಿ ವಾಸವಿರುತ್ತೇನೆ. ಸದರಿ ಎನ್ನಾಗರ ಗ್ರಾಮದಲ್ಲಿ ನಮಗೆ ಮನೆ ಸ್ವತ್ತುಗಳು ಇರುತ್ತವೆ. ನಾನು 8ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ಕನ್ನಡ ಭಾಷೆ ಓದಲು ಬರೆಯಲು ನನಗೆ ಬರುತ್ತದೆ. 1 ರಿಂದ 6ನೇ ವಾದಿಯರಾದ ನಾವುಗಳು ಸುಮಾರು 30 ವರ್ಷಗಳಿಂದ ಪ್ರತ್ಯೇಕವಾಗಿ ವಾಸವಿರುತ್ತೇವೆ. ಆ ಸಮಯ ನಾವುಗಳು ವಿಭಾಗ ಮಾಡಿಕೊಂಡು ಬೇರೆಯಾಗಿರುತ್ತೇವೆ. ಆ ಸಮಯ ವಿಭಾಗ ಪತ್ರ ಬರೆದಿರುತ್ತೇವೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. 1 ರಿಂದ 7ನೇ ಪ್ರತಿವಾದಿಯರು ನನಗೆ ಯಾವ ರೀತಿ ಸಂಬಂಧ ಎಂದರೆ ಸಾಕ್ಷಿ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಈ ದಾವೆ ಹೂಡಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ವಕೀಲರಿಗೆ ಪ್ರತಿವಾದಿಯರ ಹೆಸರು ಹಾಗೂ ವಿಳಾಸವನ್ನು ನಾನೇ ಹೇಳಿರುತ್ತೇನೆ. ದಾವಾ ಸ್ವತ್ತುಗಳ ಕಂದಾಯ ದಾಖಲೆಗಳು ಪ್ರತಿವಾದಿಯರ ಹೆಸರಿಗೆ ಇದ್ದ ಕಾರಣ ಅವರುಗಳನ್ನು ದಾವೆಗೆ ಸೇರಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಸಂಗತಿಗಳು ನನಗೆ ತಿಳಿದಿಲ್ಲ. ಅದಕ್ಕೆ ಸಹಿ ಮಾಡುವ ಸಮಯ ಅದರಲ್ಲಿನ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡಿಲ್ಲ. ನಿ.ಪಿ.1 ವಂಶವೃಕ್ಷವನ್ನು ನನ್ನ ದೊಡ್ಡಪ್ಪ ಸಿದ್ಧರಾಮಣ್ಣರವರು ಹೇಳಿ ಬರೆಸಿರುತ್ತಾರೆ. ನನ್ನ ತಾತನ ಹೆಸರು ನಂಜಪ್ಪ ಎಂದರೆ ಸರಿ. ಆತನಿಗೆ ಎಷ್ಟು ಜನ ಸಹೋದರರು ನನಗೆ ತಿಳಿದಿಲ್ಲ. ಆತನ ತಮ್ಮ ಬಸಪ್ಪ ಯಾನೇ ಬಸಯ್ಯ ಎನ್ನುವವರು ನನಗೆ ತಿಳಿದಿಲ್ಲ. ಅದರಂತೆ ಆತನಿಗೆ ಸಿದ್ದಪ್ಪ ಯಾನೇ ಪತ್ರೆ ಸಿದ್ಧಪ್ಪ ಎಂಬ ಮತ್ತೊಬ್ಬ ಸಹೋದರ ಇದ್ದರು ಎಂದರೆ ನನಗೆ ತಿಳಿದಿಲ್ಲ. ಅದರಂತೆ ಆತನಿಗೆ ಶಿವಪ್ಪ ಯಾನೇ ಶಿವಣ್ಣ ಎಂಬ ಮತ್ತೊಬ್ಬ ಸಹೋದರ ಇದ್ದರು ಎಂದರೆ ನನಗೆ ತಿಳಿದಿಲ್ಲ. ನನ್ನ ಅಜ್ಜಿಯ ಹೆಸರು ನನಗೆ ತಿಳಿದಿಲ್ಲ.

6. ನನ್ನ ತಂದೆ ಚಿಕ್ಕಪುಟ್ಟಪ್ಪರವರಿಗೆ ಒಟ್ಟು ನಾಲ್ಕು ಜನ ಸಹೋದರರು, ಅವರೆಂದರೆ ಸಿದ್ಧರಾಮಣ್ಣ, ಮಾದಯ್ಯ, ಶಿವಣ್ಣ ಹಾಗೂ ರುದ್ರಪ್ಪ. ನನ್ನ ತಂದೆಗೆ ಜೋತಯ್ಯ ಎಂಬ ಮತ್ತೊಬ್ಬ ಸಹೋದರ ಇದ್ದರು

ಎಂದರೆ ನನಗೆ ತಿಳಿದಿಲ್ಲ. ನಾನು ಈ ದಾವೆಯನ್ನು 165/2 ಸ್ವತ್ತಿನ ಸಂಬಂಧ ಹೂಡಿರುತ್ತೇನೆ. ಅದು 30 ಗುಂಟೆ ಇರುತ್ತದೆ. ಅದಕ್ಕೆ ಚೆಕ್ಕುಬಂದಿ ಪೂರ್ವಕ್ಕೆ ಎಚ್.ಬಿ. ನಂಜುಂಡಪ್ಪರವರ ಸ್ವತ್ತು, ಪಶ್ಚಿಮಕ್ಕೆ ಪ್ರತಿವಾದಿಯರ ಸ್ವತ್ತು, ಉತ್ತರಕ್ಕೆ ತೋಟಿ ಇನಾಮ್ತಿ ಜಮೀನು, ದಕ್ಷಿಣಕ್ಕೆ ನನಗೆ ಸೇರಿದ ಸರ್ವೆ ನಂ.166/3ರ ಸ್ವತ್ತು ಇರುತ್ತದೆ. ಸದರಿ ಸರ್ವೆ ನಂ.166/3 ರ ಸ್ವತ್ತು 7 ಗುಂಟೆ ಇರುತ್ತದೆ. ಸದರಿ ಮೇಲೆ ಹೇಳಿದ ಚೆಕ್ಕುಬಂದಿಗೆ ಒಳಪಟ್ಟ ಸ್ವತ್ತು 1961-62ರಲ್ಲಿ ಇನಾಮು ಆದೇಶದ ಮೂಲಕ ನನ್ನ ದೊಡ್ಡಪ್ಪ ಸಿದ್ಧರಾಮಣ್ಣರವರಿಗೆ ಬಂದಿರುತ್ತದೆ. ಸದರಿ ಆದೇಶದ ನಕಲನ್ನು ನಾನು ನೋಡಿರುತ್ತೇನೆ, ಆದರೆ ಅದರ ಸಂಗತಿಗಳನ್ನು ಓದಿ ತಿಳಿದುಕೊಂಡಿರುವುದಿಲ್ಲ, ಕಾರಣ ಅದು ಆಂಗ್ಲ ಭಾಷೆಯಲ್ಲಿರುತ್ತದೆ.

7. ನನ್ನ ದೊಡ್ಡಪ್ಪ ಸಿದ್ಧರಾಮಣ್ಣರವರು ಜಮೀನು ಮಂಜೂರಾತಿ ಕೋರಿ ರಾಜಾಪುರ ಮಠದ ವಿರುದ್ಧ ರಾಜಾಪುರ ಗ್ರಾಮದ ಸ್ವತ್ತಿನ ಸಂಬಂಧ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ತಿಳಿದಿಲ್ಲ. ಸದರಿ ಅರ್ಜಿಯಲ್ಲಿ ಪ್ರತಿವಾದಿಯರು ಅಥವಾ ಅವರ ವಾರಸುದಾರರು ಪಕ್ಷಗಾರರಲ್ಲ ಎಂದರೆ ನನಗೆ ತಿಳಿದಿಲ್ಲ. ನಿ.ಪಿ.18 ಕ್ರಯಪತ್ರದ ನಕಲನ್ನು ನನಗೆ ನನ್ನ ದೊಡ್ಡಪ್ಪನ ಮಗ ನಂಜರಾಜಯ್ಯ ಎನ್ನುವವರು ನೀಡಿರುತ್ತಾರೆ. ನಿ.ಪಿ.18 ಯಾವ ಸ್ವತ್ತಿನ ಸಂಬಂಧ ಆಗಿರುತ್ತದೆ ಎಂದು ನನಗೆ ತಿಳಿದಿಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸುವ ಪೂರ್ವದಲ್ಲಿ ನಿ.ಪಿ.18ರ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಸದರಿ ನಂಜರಾಜಯ್ಯ ಸುಮಾರು 16-18 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಆತ ಮೃತ ಪಡುವ ಎಷ್ಟು ವರ್ಷಗಳ ಪೂರ್ವದಲ್ಲಿ ಸದರಿ ದಾಖಲೆಯನ್ನು ಆತ ನನಗೆ ನೀಡಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ನಿ.ಪಿ.18ರ ಸಂಗತಿಗಳ ಸಂಬಂಧ ನಾನು ಸದರಿ ನಂಜರಾಜಯ್ಯನ ಮಕ್ಕಳು ಹಾಗೂ ನಮ್ಮ ಕುಟುಂಬಸ್ಥರ ನಡುವೆ ಏನಾದರೂ ಮಾತುಕತೆ ಮಾಡಿರುತ್ತೇನೆಯೇ ಎಂದರೆ ಸಾಕ್ಷಿ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.18 ದಾಖಲೆ ಸದರಿ ನಂಜರಾಜಯ್ಯ ನನಗೆ ನೀಡಿದಾಗಿನಿಂದಲೂ ಅದು ನನ್ನ ಬಳಿಯೇ ಇರುತ್ತದೆ. ನಿ.ಪಿ.18ರ ಮೂಲ ಪತ್ರ ಯಾರ ಬಳಿ ಇರುತ್ತದೆ ನನಗೆ ತಿಳಿದಿಲ್ಲ. ನಿ.ಪಿ.18 ದಾಖಲೆಯನ್ನು 2022ನೇ ಸಾಲಿನಲ್ಲಿ ನಾನು ಅರ್ಜಿ ಸಲ್ಲಿಸಿ ಪಡೆದಿರುತ್ತೇನೆ ಎಂದರೆ ಸರಿ. ಸದರಿ ದಾಖಲೆ ಈ ದಾವಾ ಸ್ವತ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿ. ಸದರಿ ದಾಖಲೆಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸರಿ.

8. ಓ.ಎಸ್.306/1994ರ ದಾವಯಲ್ಲಿ ನಾನು ಪಕ್ಷಗಾರನಾಗಿದ್ದೆನು. ಸದರಿ ದಾವೆಯನ್ನು ಸದರಿ ನಂಜರಾಜಯ್ಯ ನನ್ನ ತಾಯಿ ಹಾಗೂ ಇತರರ ವಿರುದ್ಧ ಹೂಡಿದ್ದರು. ಸದರಿ ದಾವೆಯ ರಾಜಿ ಡಿಕ್ರಿಯಂತೆ ರಾಜಿ ಪತ್ರದಲ್ಲಿ ನಮೂದಿಸಿದ ಅನುಸೂಚಿ ಬಿ ಸ್ವತ್ತುಗಳು ನನ್ನ ತಾಯಿಯ ಭಾಗಕ್ಕೆ ಬಂದಿರುತ್ತವೆ. ಸದರಿ ರಾಜಿ ಅರ್ಜಿಯಲ್ಲಿ ದಾವಾ ಸರ್ವೆ ನಂ.165/2 ಹಾಗೂ 166/3ರಲ್ಲಿ 14 ಗುಂಟೆ ಜಮೀನು ನನ್ನ

ತಾಯಿಗೆ ಬಂದಿದ್ದಾಗಿ ನಮೂದು ಇರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂ.165/2 ಸದರಿ ರಾಜಿ ಸಮಯ ಪೋಡು ಆಗಿರಲಿಲ್ಲ ಎಂದರೆ ಸರಿಯಲ್ಲ. ಆ ಸಂಬಂಧ ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ. ಸದರಿ ಸರ್ವೆ ನಂ.165/2 ಹಾಗೂ 166/3 ಸ್ವತ್ತುಗಳು ಪ್ರತ್ಯೇಕವಾಗಿ ಎಷ್ಟು ವಿಸ್ತೀರ್ಣ ಹೊಂದಿದ್ದವು ಎಂದು ರಾಜಿ ಡಿಕ್ರಿಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಸರ್ವೆ ನಂ.165/2 ರ ಜಮೀನು 7 ಗುಂಟೆ ಇತ್ತು ಎಂದು ನುಡಿಯುತ್ತಾರೆ.

**<u>ಪ್ರತಿವಾದಿಯರ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.</u>**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ. ಶ್ರೀಕಾಂತ್)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಆನೇಕಲ್.**